## ದ್ವಿರುಕ್ತಿಗಳು

*'ದ್ವಿ' ಎಂದರೆ ಎರಡು 'ಉಕ್ತಿ' ಎಂದರೆ ಮಾತು ಅಥವಾ ಶಬ್ದ ಎಂದರ್ಥ.

ಒಂದು ಪದವನ್ನು ಅಥವಾ ಒಂದು ವಾಕ್ಯವನ್ನು ಬಿಡುವು ಇಲ್ಲದೆ ಎರಡು ಸಲ ಪ್ರಯೋಗಿಸುವುದನ್ನು ಅಥವಾ ಹೇಳುವುದನ್ನು 'ದ್ವಿರುಕ್ತಿ' ಎನ್ನುವರು.

ಉದಾ– 1. ಉತ್ಸಾಹ–

ಹೌದು ಹೌದು! ನಾನೇ ಗೆದ್ದೆ

2. ಹೆಚ್ಚು ( ಅಧಿಕ್ಯ)– ದೊಡ್ಡ ದೊಡ್ಡ ಬಂಡೆಗಲ್ಲುಗಳಿವೆ.

3.ಪ್ರತಿಯೊಂದು – ಮನೆಮನಗಲನ್ನು ತಿರುಗಿದೆನು

4.ಕೋಪ– ಎಲೆಲಾ! ಮೂರ್ಖ ! ನಿಲ್ಲು ನಿಲ್ಲು

5.ಸಂಭ್ರಮ– ಬನ್ನಿ ಬನ್ನಿ ಕುಳಳಿತುಕೊಳ್ಳಿ

6.ಆಶ್ಚರ್ಯ – ಅಬ್ಬಬ್ಬಾ ! ಎಂಥಾ ರಮ್ಯ ನೋಟವಿದು

7.ಆಕ್ಷೇಪಾರ್ಥ – ಬೇಡ ಬೇಡ ಅವರಿಗೆ ಕೊಡಬೇಡ

8 ಒಪ್ಪಿಗೆ– ಇರಲಿ ಇರಲಿ ಅದು ಉತ್ತಮವಾಗಿದೆ.

9 ಅವಸರ– ನಡೆನಡೆ ಹೊತ್ತಯಿತು.

10 ಮೊಟ್ಟಮೊದಲು ನಾನು ಕುಳಿತುಕೊಳ್ಳುತ್ತೇನೆ.

## ಅನುಕರಣಾವ್ಯಯ

***ಕೆಲ**ವು ಅರ್ಥವಿಲ್ಲದ ರ್ಧವನಿವಿಧೇಷಗಳನ್ನು ಪುನಃ ಉಚ್ಚರಣೆ ಮಾಡಿಹೇಳುತ್ತೇವೆ. ಇಂತಹ ಧ್ನಿ ವಿಶೇಷಗಳನ್ನು ಅನುಕರಣಾವ್ಯ ಎಂದು ಕರೆಯುತ್ತೇವೆ.

1. ಪಟಪಟ 6.ಗುಡು ಗುಡು

2. ಸರ ಸರ 7. ದಬದಬ

3.ಗುಳುಗುಳು 8. ಗಡಗಡ

4. ಥರ ಥರ 9. ಜುಳುಜುಳು

5.ಘಮಘಮ 10. ಚುರುಚರು

| **ಸಮಾನಾರ್ಥಕ ಪದಗಳು** | **ಗ್ರಾಮ್ಯ –ಗ್ರಾಂಥಿಕ ಪದಗಳು** |
|---|---|
| 1. ಪ್ರಸಿದ್ಧ –ಖ್ಯಾತ ಗೌರವಾನ್ವಿತ | 1. ಮ್ಯಾಗ – ಮೇಲೆ |
| 2. ಪವನ – ಗಾಳಿ ವಾಯು | 2.ಹಾಸ್ಗೆ – ಹಾಸಿಗೆ |
| 3. ಪುತ್ರಿ – ಸುತೆ ಮಗಳು | 3. ಬೇಗ್ನೆ – ಬೇಗನೆ |
| 4. ಗರುಡ – ಉರಗಾರಿ ಪನ್ನಗಾಶನ | 4.ಊರಾಗ – ಊರಿನಲ್ಲಿ |
| 5. ಪಕ್ಷಿ – ಖಗ ದ್ವಿಜ | 5.ಸಾಲಿ – ಶಾಲೆ |
| 6. ಅಂತ್ಯ – ಸಮಾಪ್ತಿ ಅವಸಾನ | 6. ಆಯ್ತು – ಆಯಿತು |
| 7. ಠಕ್ಕ – ಮೋಸಗಾರ ಕಳ್ಳ | 7. ಮ್ಯಾಗೆ – ಮೇಲೆ |
| 8. ಕಮಲ – ತಾವರೆ ಅಂಬುಜ | 8.ಹೊದ್ಕೊಂಡು – ಹೊತ್ತುಕೊಂಡು |
| 9. ಒಡೆಯ – ಸ್ವಾಮಿ ಅಧಿಪತಿ | 9. ಇಸವಾಸ – ವಿಶ್ವಾಸ |
| **10.ಇಚ್ಛೆ – ಅಭಿಲಾಷೆ ಆಕಾಂಕ್ಷೆ** | **10. ಸಾವಾಸ – ಸಹವಾಸ** |

**ಗಾದೆ ಮಾತುಗಳು**

*ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ತುಂಬಿದ ಕೊಡ ತುಳುಕುವುದಿಲ್ಲ.

**1.ತುಂಬಿದ ಕೊಡ ತುಳುಕುವುದಿಲ್ಲ.**

**ಅರ್ಥ** – ತುಂಬಿದ ಕೊಡವು ಬುದ್ಧಿವಂತಿಕೆಯ ಅರ್ಥವನ್ನು, ಅರ್ಧ ತುಂಬಿದ ಕೊಡವು ಅಹಂಕಾರದ ಅಥವಾ ಅಜ್ಞಾನದ ಅರ್ಥ ಕೊಡುತ್ತದೆ.

**ವಿವರಣೆ–** ಪ್ರಪಂಚವನ್ನು ಅರಿತವನು ಕ್ಷಮೆ, ಸದ್ಗುಣಗಳನ್ನು ಕಲಿತು ನೆಮ್ಮದಿಯಿಂದ ಬಾಳಲು ಪ್ರಯತ್ನಿಸುತ್ತಾನೆ. ಪೂರ್ತಿ ಜ್ಞಾನ ಪಡೆದವನು ಪರರಿಗೆ ಉಪಕಾರಿಯಾಗಿ ಬಾಳುತ್ತಾನೆ. ಹಾಗೆಯೇ ಇಂತವರು ಅಹಂಕಾರ ಪಡದೆ ಸಮಯ,ಸಂದರ್ಭ ಬಂದಾಗ ಮಾತ್ರ ಮಾತನಾಡಿ ತಮ್ಮ ಜಾಣ್ಮೆಯನ್ನು ಪ್ರದರ್ಶಿಸುತ್ತಾರೆ. ಇಂತವರನ್ನು ತುಂಬಿದ ಕೊಡಕ್ಕೆ ಹೋಲಿಸಲಾಗಿದೆ. ಇನ್ನು ಕೆಲವೊಂದಷ್ಟು ಜನ ಯಾವಾಗಲೂ ತಮ್ಮಲ್ಲಿ ಇಲ್ಲದ ಗುಣವನ್ನು ಹೆಚ್ಚಿಸಿ ಹೇಳುತ್ತಾನೆ.ತಾವೇ ಬುದ್ಧಿವಂತರು ಎಂಬಂತೆ

ಜಂಭಕೊಚ್ಚಿಕೊಳ್ಳುತ್ತಾರೆ. ಅಂತವರನ್ನು ಅರ್ಧತುಂಬಿದ ಕೊಡಕ್ಕೆ ಹೋಲಿಸಲಾಗಿದೆ. ಅಗತ್ಯ ಬಿದ್ದಾಗ ಮಾತ್ರ ನಮ್ಮ ವಿದ್ಯೆಯನ್ನು ಪ್ರದರ್ಶಿಸಬೇಕು ಎಂಬುದೇ ಈ ಗಾದೆ ಮಾತಿನ ಅರ್ಥವಾಗಿದೆ.

2.ಬೆಳ್ಳಗಿರುವುದೆಲ್ಲ ಹಾಲಲ್ಲ

**ಅರ್ಥ** – ವಸ್ತುವಿನ ಮತ್ತು ವ್ಯಕ್ತಿಯ ಹೊರ ಬಣ್ಣವನ್ನು ನೋಡಿ ಬೆಲೆ ಕೊಡುವುದು, ಗೌರವಿಸುವುದು ಅಪಾಯಕರ.

**ವಿವರಣೆ–** ಬುದ್ಧಿವಂತಿಕೆ ಎಚ್ಚರಿಕೆಯ, ಪ್ರಜ್ಞೆಯನ್ನು ಯಾರು ಬೆಳೆಸಿಕೊಳ್ಳುತ್ತಾರೋ ಅವರಿಗೆ ಮಾತ್ರ ಬದುಕಿನಲ್ಲಿ ಸೋಲಾಗುವುದಿಲ್ಲ.ಹಾಲು ಇದೊಂದು ಭೂಮಿಯ ಮೇಲಿನ ಅಮೃತ, ಸಮತೂಕ ಹೊಂದಿರುವ ಆಹಾರವು ಹೌದು ಹಾಲನ್ನು ಕುಡಿಯುತ್ತೇವೆ ಎಂದು ಬೆಳ್ಳಗಿರುವ ಸುಣ್ಣದ ನೀರನ್ನು ಕುಡಿಯಲು ಸಾಧ್ಯವೇ

ಉದಾ– ಕಾಗೆಯು ಕಪ್ಪಗಿರುತ್ತದೆ, ಕೋಗಿಲೆಯು ಕಪ್ಪಗಿರುತ್ತದೆ ಆಧರೆ ಎರಡು ಒಂದೇ ಆಗುವುದಕ್ಕೆ ಸಾಧ್ಯವಿಲ್ಲ.

ಮನುಷ್ಯರ ಬಾಹ್ಯನೋಟಕ್ಕೆ ಮರುಳಾಗದೇ ಸೂಕ್ಷ್ಮವಾಗಿ ಗಮನಿಸಿ ನಿರ್ಧಾರ ಮಾಡಬೇಕು ಇಲ್ಲದಿದ್ದರೆ ಮೋಸಹೋಗ ಬೇಕಾಗುತ್ತದೆ. ಎಂಬುದೇ ಈ ಗಾದೆಮಾತಿನ ಆರ್ಥವಾಗಿದೆ.